# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

೨ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ದಿನಾಂಕ:25.04.2015ರಂದು ಮಧ್ಯಾಹ್ನ 11.00 ಗಂಟೆಗೆ ನಿಗಮದ ಕೇಂದ್ರ ಕಚೇರಿಯಲ್ಲಿರುವ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 206ನೇ ನಿರ್ದೇಶಕರ ಮಂಡಳ ಸಭೆಯ ನಡವಳಿಗಳು:**

**ಹಾಜರಾತಿ:**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀಮತಿ ಎಂ.ವಿ. ಸಾವಿತ್ರಿ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು (ಕಲ್ಯಾಣ)<br>ಆರ್ಥಿಕ ಇಲಾಖೆ | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| ಶ್ರೀ ಹೀರಾನಾಯಕ್, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |



8/5/15

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಾಜರಿದ್ದ ನಿರ್ದೇಶಕರ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿಕೊಂಡ ನಂತರ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 206ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 206ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 01: 205ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು.**

* * * * *

ದಿನಾಂಕ:05.03.2015 ರಂದು ನಡೆದ 205ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಿ ಸ್ಥಿರೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ:2: ನಿಗಮದ 205ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ**

205ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ 26 ನಿರ್ಣಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಲಾಯಿತು. 31.03.2015ರ ಅಂತ್ಯಕ್ಕೆ ಶೇ.59.30ರಷ್ಟು ಪ್ರಗತಿ ಸಾಧಿಸಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಅನುಸರಣಾ ವರದಿಯನ್ನು ಸಭೆಯು ಅವಗಾಹಿಸಿ ಅಂಗೀಕರಿಸಿತು.

**ವಿಷಯ ಸಂಖ್ಯೆ: 03 :** ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರನ್ವಯ ನಿಗಮದಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ 18 ನೌಕರರಿಗೆ ಅರ್ಹ ವೇತನ ಭತ್ಯೆ ಮತ್ತು ಇತರೆ ಸೌಲಭ್ಯ ಮಂಜೂರು ಮಾಡುವ ಬಗ್ಗೆ.

ಈ ವಿಷಯದ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರಲ್ಲಿ ಷರತ್ತುಗಳ ಅಡಿಯಲ್ಲಿ ಅರ್ಹರಿರುವ ಮತ್ತು ನಿಗಮದಿಂದ ನಿಗದಿತ ವೇತನ ಪಡೆಯುತ್ತಿರುವ ಅರ್ಹ ನೌಕರರಿಗೆ ಸದರಿ ಅಧಿನಿಯಮದಲ್ಲಿ ಈ ಅಭ್ಯರ್ಥಿಗಳು ಕೆಲಸಕ್ಕೆ ಸೇರಿದ ದಿನಾಂಕದಂದು ಹೊಂದಿದ್ದ ವಿದ್ಯಾರ್ಹತೆಗೆ ಅನುಗುಣವಾಗಿ ಹುದ್ದೆಗಳನ್ನು ತೋರಿಸುವ ಬಗ್ಗೆ ಮತ್ತು ಸದರಿ ಕಾಯ್ದೆಯಂತೆ ಸವಲತ್ತುಗಳನ್ನು ನೀಡುವ ಬಗ್ಗೆ ಸಭೆಯು ಚರ್ಚಿಸಿತು. ಮುಂದುವರೆದು ಸದರಿ ಪಟ್ಟಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಬಾಹ್ಯ ಸಂಸ್ಥೆಗಳ ಮೂಲಕ ವೇತನ ಪಡೆದು ಕಾರ್ಯನಿರ್ವಹಿಸುತ್ತಿರುವ 07 ಅಭ್ಯರ್ಥಿಗಳಿಗೆ ಸದರಿ ಕಾಯ್ದೆಯಡಿ ಸವಲತ್ತುಗಳನ್ನು ನೀಡುವ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸೇವಾ ನಿಯಮಾವಳಿಗಳ ಶಾಖೆಯಿಂದ ಸಲಹೆ ಪಡೆದು ಸದರಿ ಸಲಹೆಯಂತೆ ಮುಂದಿನ ಕ್ರಮ ವಹಿಸುವುದು ಸೂಕ್ತವೆಂದು ಸಭೆಯು ಅಭಿಪ್ರಾಯಿಸಿತು.



8/5/15

ನಿರ್ಣಯ: ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ಷರತ್ತುಗಳಂತೆ 11 ಅಭ್ಯರ್ಥಿಗಳು ಕೆಲಸಕ್ಕೆ ಸೇರಿದ ದಿನಾಂಕದಂದು ಇದ್ದ ವಿದ್ಯಾರ್ಹತೆಗೆ ಅನುಗುಣವಾಗಿ ಹುದ್ದೆಗಳ ಪಟ್ಟಿ ತಯಾರಿಸಿ, ಸದರಿ ಅಭ್ಯರ್ಥಿಗಳಿಗೆ ಕಾಯ್ದೆಯಲ್ಲಿನ ಷರತ್ತುಗಳಂತೆ ಅರ್ಹವಿರುವ ಸವಲತ್ತುಗಳನ್ನು ನೀಡಲು ಸಭೆಯು ತೀರ್ಮಾನಿಸಿತು.

ಮುಂದುವರೆದು ಬಾಹ್ಯ ಸಂಸ್ಥೆಗಳಿಂದ ವೇತನ ಪಡೆದು 2006ಕ್ಕೆ 10 ವರ್ಷಗಳ ಸೇವೆ ಪೂರೈಸಿರುವ 07 ಅಭ್ಯರ್ಥಿಗಳಿಗೆ ಕಾಯ್ದೆಯಂತೆ ಸವಲತ್ತುಗಳನ್ನು ನೀಡಲು ಬರುವುದೇ ಎಂಬ ಬಗ್ಗೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸೇವಾ ನಿಯಮಾವಳಿ ಶಾಖೆಯಿಂದ ಅಭಿಪ್ರಾಯ ಪಡೆದು, ಸೂಕ್ತ ತೀರ್ಮಾನಕ್ಕೆ ಮಂಡಳಿ ಸಭೆಗೆ ಮಂಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿ ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ: 04 :** ಬೇರೆ ಇಲಾಖೆ/ನಿಗಮಗಳಿಗೆ ನಿಯೋಜನೆ ಮೇಲೆ ಹೋಗಿರುವ ಅಧಿಕಾರಿ/ನೌಕರರ ಸೇವೆಯನ್ನು ನಿಗಮಕ್ಕೆ ಹಿಂಪಡೆಯುವ ಕುರಿತು

ಪ್ರಸ್ತುತ ನಿಗಮದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ಕೊರತೆ ಹೆಚ್ಚಿದ್ದೂ, ನಿಗಮದ 08 ಅಧಿಕಾರಿಗಳು ನಿಯೋಜನೆ ಮೇಲೆ ಅನ್ಯ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಸೇವೆಯನ್ನು ಹಿಂಪಡೆದು ನಿಗಮದ ವಿವಿದ ಕಛೇರಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲು ನಿಗಮದ ಮಾನ್ಯ ಅಧ್ಯಕ್ಷರು ನೀಡಿದ್ದ ಸೂಚನೆಯ ಮೇರೆಗೆ ನಿಯೋಜನೆ ರದ್ದುಪಡಿಸಿ ಸ್ಥಳ ನಿಯುಕ್ತಿ ಆದೇಶ ಹೊರಡಿಸಿದ್ದರೂ ಸಹ ಈ ಕೆಳಗಿನ ಅಧಿಕಾರಿ ಮತ್ತು ಸಿಬ್ಬಂದಿಗಳು ಅವರನ್ನು ಸ್ಥಳ ನಿಯುಕ್ತಿಗೊಳಿಸಲಾಗಿದ್ದ ಸ್ಥಳಗಳಲ್ಲಿ ವರದಿ ಮಾಡಿಕೊಂಡಿರುವುದಿಲ್ಲದರ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.

| ಕ್ರ.ಸಂ | ಅಧಿಕಾರಿಗಳ ಹೆಸರು | ಇಲಾಖೆ | ಅವಧಿ |
|---|---|---|---|
| 01 | ಜಿ.ಜೆ ಪದ್ಮನಾಭ್,<br>ಜಿಲ್ಲಾ ವ್ಯವಸ್ಥಾಪಕರು | ನಗರಾಭಿವೃದ್ಧಿ ಇಲಾಖೆ | 7 ವರ್ಷ 8 ತಿಂಗಳು<br>(02.08.2007) |
| 02 | ಪ್ರಕಾಶ್ ಎಂ ಹರ್ಗಾಪುರ,<br>ಜಿಲ್ಲಾ ವ್ಯವಸ್ಥಾಪಕರು | ಹಿಂದುಳಿದ ವರ್ಗಗಳ ಕಲ್ಯಾಣ<br>ಇಲಾಖೆ | 2 ವರ್ಷ 10 ತಿಂಗಳು<br>(12.06.2012) |
| 03 | ಕೆ.ಆರ್ ಮಾಧುರಾವ್,<br>ತಾಲ್ಲೂಕು ಅಭಿವೃದ್ಧಿ ಅಧಿಕಾರಿ | ಕರ್ನಾಟಕದ ಅಲ್ಪಸಂಖ್ಯಾತರ<br>ಅಭಿವೃದ್ಧಿ ನಿಗಮ | 14 ವರ್ಷ 8 ತಿಂಗಳು<br>(09.10.2000) |
| 04 | ಕೆ.ಗುಣ್ಣಯ್ಯ,<br>ತಾಲ್ಲೂಕು ಅಭಿವೃದ್ಧಿ ಅಧಿಕಾರಿ | ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ನಿಗಮ | 3 ವರ್ಷ 10 ತಿಂಗಳು<br>(30.06.2011 |
| 05 | ಎನ್. ಶ್ರೀನಿವಾಸ್,<br>ತಾಲ್ಲೂಕು ಅಭಿವೃದ್ಧಿ ಅಧಿಕಾರಿ | ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ನಿಗಮ | 8 ವರ್ಷ 10 ತಿಂಗಳು<br>(06.07.2007) |
| 06 | ಮರಿಸ್ವಾಮಿ,<br>ತಾಲ್ಲೂಕು ಅಭಿವೃದ್ಧಿ ಅಧಿಕಾರಿ | ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ನಿಗಮ | 1 ವರ್ಷ 8 ತಿಂಗಳು<br>(28.09.2013) |
| 07 | ವಿ. ಮಹಾಲಿಂಗಯ್ಯ,<br>ದ್ವಿತಿಯ ದರ್ಜೆ ಸಹಾಯಕರು | ಕರ್ನಾಟಕ ತಾಂಡ ಅಭಿವೃದ್ಧಿ<br>ನಿಗಮ | 1 ವರ್ಷ 8 ತಿಂಗಳು<br>(11.09.2013) |
| 08 | ಎಸ್.ಕೆ ಗೋಪಾಲಯ್ಯ,<br>ತಾಲ್ಲೂಕು ಅಭಿವೃದ್ಧಿ ಅಧಿಕಾರಿ | ಕರ್ನಾಟಕ ಮಹರ್ಷಿ ವಾಲ್ಮೀಕಿ<br>ಪರಿಶಿಷ್ಟ ಪಂಗಡಗಳ ನಿಗಮ | 6 ವರ್ಷ 7 ತಿಂಗಳು<br>(11.09.2008) |

ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಸಭೆಯು ನಿಯೋಜನೆಯ ಮೇಲೆ ಅನ್ಯ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲಿನ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ತಕ್ಷಣವೇ ಅವರನ್ನು ಸ್ಥಳ



8/5/15

ನಿಯುಕ್ತಿಗೊಳಸಿರುವ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳಲು ಮತ್ತೊಮ್ಮೆ ತಿಳಸುವಂತೆ, ಒಂದು ವೇಳೆ ಈ ಅಧಿಕಾರಿ ಮತ್ತು ಸಿಬ್ಬಂದಿಗಳು ನಿಗಮದ ಸೂಚನೆಗಳನ್ನು ಪಾಲಿಸಿ ಅವರನ್ನು ಸ್ಥಳ ನಿಯುಕ್ತಿಗೊಳಸಿದ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳದಿದ್ದಲ್ಲಿ ನಿಗಮದ ಸಿಸಿಎ ನಿಯಮಾವಳಗಳಡಿ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ ಚರ್ಚಿಸಲಾಯಿತು.

**ನಿರ್ಣಯ: ಅನ್ಯ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಗಮದ ಮೇಲಿನ 08 ಅಧಿಕಾರಿ ಮತ್ತು ಸಿಬ್ಬಂದಿಗಳು ತಕ್ಷಣ ಅವರನ್ನು ಸ್ಥಳ ನಿಯುಕ್ತಿಗೊಳಸಿರುವ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳಲು ಕಟ್ಟುನಿಟ್ಟಾಗಿ ಸೂಚಿಸುವಂತೆ, ಒಂದು ವೇಳೆ ಈ ಅಧಿಕಾರಿ ಮತ್ತು ಸಿಬ್ಬಂದಿಗಳು ನಿಗಮದ ಸೂಚನೆಗಳನ್ನು ಪಾಲಿಸಿ ಅವರನ್ನು ಸ್ಥಳ ನಿಯುಕ್ತಿಗೊಳಸಿರುವ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳದಿದ್ದಲ್ಲಿ ನಿಗಮದ ಸಿಸಿಎ ನಿಯಮಾವಳಗಳಡಿ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿ ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 05 :** ನಿಗಮದ ಗ್ರೂಪ್ ಎ ಮತ್ತು ಬಿ ಹಾಗೂ ಸಿ ವೃಂದದ ಅಧಿಕಾರಿ/ ನೌಕರರಿಗೆ ಓರಿಯೆಂಟೇಷನ್ ತರಬೇತಿಯನ್ನು ಮೈಸೂರಿನ ಆಡಳತ ತರಬೇತಿ ಸಂಸ್ಥೆಯ ಮೂಲಕ ನೀಡುವ ಬಗ್ಗೆ.

ಹಾಲಿ ನಿಗಮದಲ್ಲಿ 101 ಎ,ಬಿ ಹಾಗೂ ಸಿ ಗುಂಪಿನ (ಡಿ.ಜಿ.ಎಂ-03, ಜಿ.ವ್ಯ-14, ಸ.ಜಿ.ವ್ಯ-11 ಮತ್ತು ತಾ.ಅ.ಅ. ಮತ್ತು ಕ.ಅ.(ಗುಂಪು ಸಿ-76)) ಅಧಿಕಾರಿ/ನೌಕರರು ಕಾರ್ಯ ನಿರ್ವಹಿಸುತ್ತಿದಾರೆ, ಇವರಿಗೆ ಕಛೇರಿ ಕಾರ್ಯವಿಧಾನಗಳು, ಕಡತ ನಿರ್ವಹಣೆ, ಹಣ ಡ್ರಾ ಮಾಡುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು, ಸಾರ್ವಜನಿಕ ಸಂಸ್ಥೆಗಳು, ಒತ್ತಡ ನಿರ್ವಹಣೆ, ಗಣಕ ಮೂಲ ತತ್ವಗಳು, ವ್ಯವಹರಣೆ ನಿಯಮಗಳು, ಹಣಕಾಸು ನಿರ್ವಹಣೆ ಮಾಹಿತಿ ಹಕ್ಕು ಕಾಯ್ದೆ, ಸಕಾಲ ವರ್ಗೀಕರಣ ನಿಯಂತ್ರಣ ಮತ್ತು ಅಪೀಲು ನಿಯಮಗಳು, ನಡತೆ ನಿಯಮಗಳು, ಆದಾಯ ತೆರಿಗೆ ಇ-ರಿಟರ್ನ್ಸ್, ಸೇವಾ ತೆರಿಗೆ, ಅಂತರಿಕ ಲೆಕ್ಕ ಪರಿಶೋಧನೆ, ಶಾಸನಬದ್ಧ ಲೆಕ್ಕ ಪರಿಶೋಧನೆ, ಅಡಿಟ್ ಕಂಡಿಕೆಗಳಗೆ ಅನುಪಾಲನಾ ವರದಿ ಸಲ್ಲಿಸುವ ವಿಷಯಗಳ ಬಗ್ಗೆ ತರಬೇತಿಯನ್ನು ಮೈಸೂರಿನ ಆಡಳತ ತರಬೇತಿ ಸಂಸ್ಥೆಯ ವತಿಯಿಂದ 5 ದಿನಗಳ ಕಾಲ ಓರಿಯೆಂಟೇಷನ್ ತರಬೇತಿಯನ್ನು ನೀಡಲು, ಪ್ರತಿ ಶಿಕ್ಷಣಾರ್ಥಿಗೆ ರೂ.4,836/-ರಂತೆ 101 ಶಿಕ್ಷಣಾರ್ಥಿಗಳಗೆ ಒಟ್ಟು ರೂ.4,88,455/- ತಗಲುವುದಾಗಿ ಮಹಾ ನಿರ್ದೇಶಕರು ಆಡಳತ ತರಬೇತಿ ಸಂಸ್ಥೆ, ಮೈಸೂರು ಇವರು ತಿಳಸಿರುತ್ತಾರೆ. ಸದರಿ ತರಬೇತಿಯನ್ನು 3 ತಂಡಗಳಲ್ಲಿ ಮೇ -2015ರ ಮಾಹೆಯಲ್ಲಿ ಪ್ರತಿ ತಂಡದಲ್ಲಿ 35 ಶಿಕ್ಷಣಾರ್ಥಿಯನ್ನು ಒಳಗೊಂಡಂತೆ, 101 ಅಧಿಕಾರಿ/ನೌಕರರಿಗೆ ಓರಿಯೆಂಟೇಷನ್ ತರಬೇತಿಯನ್ನು ಕೊಡಿಸಲು ದಿನಾಂಕ ನಿಗದಿಗೊಳಸಲಾಗಿರುವ ಬಗ್ಗೆ ಸಭೆಗೆ ತಿಳಸಿ, ಈ ಸಂಬಂಧ ಆಡಳತ ತರಬೇತಿ ಸಂಸ್ಥೆಗೆ ರೂ.4,88,455/-ಗಳನ್ನು ಪಾವತಿಸಲು ವ್ಯವಸ್ಥಾಪಕ ನಿರ್ದೇಶಕರು ಅನುಮತಿ ಕೋರಿದರು.

**ನಿರ್ಣಯ: ಈ ಬಗ್ಗೆ ಸಭೆಯು ಸುಧೀರ್ಘವಾಗಿ ಚರ್ಚಿಸಿತು. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ನಿಗಮದಲ್ಲಿ ಇರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಗೆ ತರಬೇತಿ ನೀಡುವ ಅಗತ್ಯವಿದೆ ಎಂದು, ತಳಮಟ್ಟದ ಸಿಬ್ಬಂದಿಗೂ ಸಹ ತರಬೇತಿ ನೀಡಲು ಸೂಚಿಸಿದರು. ಮೇಲಿನ ತರಬೇತಿಗಳಗೆ ತಗಲುವ ವೆಚ್ಚ ರೂ.4,88.455/-ಗಳನ್ನು ಮಹಾ ನಿರ್ದೇಶಕರು, ಆಡಳತ ತರಬೇತಿ ಸಂಸ್ಥೆ, ಮೈಸೂರು ಇವರಿಗೆ ಸಂದಾಯ ಮಾಡಿ ತರಬೇತಿ ಕೊಡಿಸಲು ಸಭೆಯು ನಿರ್ಣಯಿಸಿತು.**

ವಿಷಯ ಸಂಖ್ಯೆ: 06 : ಶ್ರೀ ಎನ್.ಆಂಜಿನಪ್ಪ, ಕಛೇರಿ ಅಧೀಕ್ಷಕರು, ಕೇಂದ್ರ ಕಛೇರಿ ಇವರ ಪತ್ನಿ ಶ್ರೀಮತಿ ಟಿ. ಪ್ರೇಮರವರ ವೈದ್ಯಕೀಯ ವೆಚ್ಚವನ್ನು ಭರಿಸುವ ಬಗ್ಗೆ.